ಕರ್ನಾಟಕ ಸರ್ಕಾರ

ಸಂ:ಗ್ರಾಅಪ/35 /ಗ್ರಾನೀಸ(4)2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27.02.2015
7.3.2015

ತುರ್ತು

## ಸುತ್ತೋಲೆ

ವಿಷಯ: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ತುರ್ತು ಕುಡಿಯುವ ನೀರಿನ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಟಾಸ್ಕ್ ಫೋರ್ಸ್ ಸಮಿತಿಗಳ ಪುನರ್ರಚನೆ ಹಾಗೂ ಪುನರ್ರಚಿತ ಮಾರ್ಗ ಸೂಚಿಗಳನ್ನು ಕುರಿತು.

ಉಲ್ಲೇಖ: (1) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 87 ಗ್ರಾನೀಸ (2) 04, ದಿನಾಂಕ: 29-03-2006.
(2)ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 95 ಗ್ರಾನೀಸ (4) 11 ದಿನಾಂಕ: 05-04-2012.
(3) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 45 ಗ್ರಾನೀಸ (2) 14 ದಿನಾಂಕ: 28-10-2009.
(4) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 07 ಗ್ರಾನೀಸ (4) 14 ದಿನಾಂಕ: 28-04-2014.
(5) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 27 ಗ್ರಾನೀಸ (4) 14 ದಿನಾಂಕ: 07-05-2014.

ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನ ಯೋಜನೆಗಳ ಸ್ಥಾವರಗಳನ್ನು ಸ್ಥಾಪಿಸಿದ್ದರೂ ಸಹ ಮುಂಬರುವ ಬೇಸಿಗೆಯಲ್ಲಿ ಗಣನೀಯ ಪ್ರಮಾಣದ ಅಂತರ್ಜಲ ಆಧಾರಿತ ಕುಡಿಯುವ ನೀರಿನ ಯೋಜನೆಗಳು ನಿಷ್ಕ್ರೀಯವಾಗಬಹುದಾಗಿದೆ. ಈ ಕಾರಣದಿಂದ ಈಗಾಗಲೇ ಉಲ್ಲೇಖಿತ ಸುತ್ತೋಲೆಗಳಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಸಮಯೋಚಿತವಾಗಿ ಪಾಲಿಸಲು ಎಲ್ಲಾ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿಗಳು ಕ್ರಮ ವಹಿಸಬೇಕು. ಈ ಹಿನ್ನೆಲೆಯಲ್ಲಿ ಈಗಿರುವ ಟಾಸ್ಕ್ ಫೋರ್ಸ್ ಸಮಿತಿಯನ್ನು ಕೆಳಕಂಡಂತೆ ಪುನರ್ರಚಿಸಿ ಆದೇಶಿಸಿದೆ.

**ಪುನರ್ರಚಿತ ತಾಲ್ಲೂಕು/ ವಿಧಾನ ಸಭಾ ಕ್ಷೇತ್ರವಾರು ಕಾರ್ಯಪಡೆ ಸಮಿತಿ:**

| | |
|---|---|
| ವಿಧಾನಸಭಾ ಕ್ಷೇತ್ರದ ಸದಸ್ಯರು | : ಅಧ್ಯಕ್ಷರು |
| ವಿಧಾನ ಪರಿಷತ್ ಸದಸ್ಯರು | : ಸದಸ್ಯರು |
| ತಾಲ್ಲೂಕು ಪಂಚಾಯ್ತಿ, ಕಾರ್ಯನಿರ್ವಾಹಕ ಅಧಿಕಾರಿ | : ಸದಸ್ಯ ಕಾರ್ಯದರ್ಶಿ |

**ಖಾಯಂ ಆಹ್ವಾನಿತರು (ಆಯಾ ತಾಲ್ಲೂಕಿಗೆ ಸಂಬಂಧಿಸಿದಂತೆ)**

1) ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರ ಸೂಚನೆಯ ಮೇರೆಗೆ ಆಹ್ವಾನಿಸುವ ಯಾವುದೇ ಚುನಾಯಿತ ಜನಪ್ರತಿನಿಧಿಗಳು / ಅಧಿಕಾರಿಗಳು.
2) ತಾಲ್ಲೂಕು ತಹಶೀಲ್ದಾರ್

3) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಭೂ ವಿಜ್ಞಾನಿ ಅಥವಾ ಅವರು ಸ್ಥಳೀಯ ಅವಶ್ಯಕತೆಯನುಸಾರ ನಾಮ ನಿರ್ದೇಶನ ಮಾಡುವ ಅಧಿಕಾರಿ

4) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ಮತ್ತು ನೈರ್ಮಲ್ಯ ವಿಭಾಗ

5) ಸಂಬಂಧಪಟ್ಟ ಎಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ / ಸಹಾಯಕ ಇಂಜಿನಿಯರ್

- ಮೇಲ್ಕಂಡ ಸಮಿತಿಯು ತತ್‌ಕ್ಷಣ ದಿನಾಂಕ: 09/10-03-2015 ರಂದು ಆಯಾ ಕ್ಷೇತ್ರಗಳ ವ್ಯಾಪ್ತಿಯ ಅಧಿಕಾರಿಗಳ ಸಭೆಯನ್ನು ಕರೆದು ಬೇಸಿಗೆಯಲ್ಲಿ ತುರ್ತು ಅವಶ್ಯಕತೆಯನ್ನು ಆಧರಿಸಿ ಅಗತ್ಯವಿರುವ ಕುಡಿಯುವ ನೀರಿನ ತುರ್ತು ಕಾಮಗಾರಿಗಳನ್ನು ಗುರುತಿಸಬೇಕು. ಈ ರೀತಿ ಕಾಮಗಾರಿಗಳನ್ನು ಗುರುತಿಸುವಾಗ NRDWP ಮಾರ್ಗಸೂಚಿ ವ್ಯಾಪ್ತಿಗೆ ಬರುವ ಜನವಸತಿಗಳು ಹಾಗೂ ಸದರಿ ವ್ಯಾಪ್ತಿಗೆ ಬಾರದಿರುವ ಜನವಸತಿಗಳ ಕುಡಿಯುವ ನೀರಿನ ಕಾಮಗಾರಿಗಳನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಬೇಕು.
- ಎನ್.ಆರ್.ಡಿ.ಡಬ್ಲ್ಯೂ.ಪಿ ಮಾರ್ಗಸೂಚಿ ವ್ಯಾಪ್ತಿಗೆ ಬರುವ ಜನವಸತಿಗಳಿಗೆ ಎನ್.ಆರ್.ಡಿ.ಡಬ್ಲ್ಯೂ.ಪಿ ಕ್ರಿಯಾ ಯೋಜನೆಯಲ್ಲಿ ಸೇರಿಸಬೇಕು. ಸದರಿ ವ್ಯಾಪ್ತಿಗೆ ಬಾರದಿರುವ ಜನವಸತಿಗಳಿಗೆ ಸರ್ಕಾರದಿಂದ ಟಾಸ್ಕ್‌ಫೋರ್ಸ್ ಗುರುತಿಸಿದ ಕಾಮಗಾರಿಗಳು **ಮಾರ್ಚ್–2015** ರೊಳಗೆ ಆಗಬೇಕಿರುವ ಕೆಲಸಗಳು ಹಾಗೂ **ಏಪ್ರಿಲ್–ಜೂನ್ 2015** ರೊಳಗೆ ಕೈಗೊಳ್ಳಬೇಕಿರುವ ಕಾಮಗಾರಿಗಳನ್ನು ಸ್ಪಷ್ಟ ಚಿತ್ರಣವನ್ನು ಹೊಂದಿರತಕ್ಕದ್ದು.
- ಗುರುತಿಸಿದ ಅನುಮೋದನೆಯಾದ ತುರ್ತು ಕುಡಿಯುವ ನೀರಿನ ಯೋಜನೆಗಳು ಕಾಲಮಿತಿಯೊಳಗೆ ನಿಯಮಾನುಸಾರ KTTP ಕಾಯಿದೆಯನ್ವಯ (>Rs.5.00 Lakh works only) ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು.
- ಅನುಷ್ಠಾನವಾದ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಚಿತ್ರಣವನ್ನು ಗಾಂಧಿಸಾಕ್ಷಿ ಕಾಯಕ (GSK) ಹಾಗೂ IMIS ನಲ್ಲಿ ಸಮರ್ಪಕವಾಗಿ ದಾಖಲಿಸಬೇಕು.
- ಟಾಸ್ಕ್ ಫೋರ್ಸ್ ಅನುಮೋದಿಸುವ ಕಾಮಗಾರಿಗಳು ಸಾಮಾನ್ಯವಾಗಿ ಹಾಲಿ ಇರುವ ಬೋರ್‌ವೆಲ್‌ಗಳ ಪುನಶ್ಚೇತನ. ಹಾಲಿ ಇರುವ ಕೈಪಂಪು ದುರಸ್ಥಿಗೊಳಿಸುವುದು, ಬೋರ್‌ವೆಲ್‌ಗಳನ್ನು ಆಳಗೊಳಿಸುವುದು, ಸ್ವಚ್ಛಗೊಳಿಸುವುದು, ಹೈಡ್ರೋಫ್ರಾಕ್ಚರಿಂಗ್ ಹಾಗೂ ತೀವ್ರ ಅವಶ್ಯಕತೆಯಿದ್ದಲ್ಲಿ ಮಾತ್ರ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದು, ಇದಲ್ಲದೆ ಹಾಲಿಯಿರುವ ಕಿರು ನೀರು ಸರಬರಾಜು ಯೋಜನೆ (MWS) ಕೊಳವೆ ನೀರು ಸರಬರಾಜು ಯೋಜನೆಗಳ (PWS) ಪೈಪ್‌ಲೈನ್‌ಗಳನ್ನು /ಟ್ಯಾಂಕ್‌ಗಳನ್ನು (OHT) ಪುನಃಶ್ಚೇತನ ಮಾಡಬಹುದು.
- ಹೊಸ ಯೋಜನೆಗಳನ್ನು ಮಾಡುವ ಬದಲು ಅನುದಾನ ಮತ್ತು ಸಮಯ ಉಳಿಸಲು ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ, ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯತೆಯನ್ನು ಆಧರಿಸಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವ ಕುರಿತು ಕ್ರಮ ವಹಿಸಬೇಕು. ಈ ಮೂಲಕ ಹೊಸದಾಗಿ ಬೋರ್‌ವೆಲ್ ಕೊರೆದು ಪಂಪ್ ಮೋಟಾರ್ ಅಳವಡಿಸಿ ಪೈಪ್ ಲೈನ್ ಕಾಮಗಾರಿ ಮಾಡಿ ವಿದ್ಯುದ್ಧೀಕರಣದ ಸಲುವಾಗಿ ದಾಖಲಿಸುವ ವೆಚ್ಚವನ್ನು ತಪ್ಪಿಸಬಹುದು.

[signature]

- ತುರ್ತು ಕುಡಿಯುವ ನೀರಿನ ಪರಿಹಾರಕ್ಕಾಗಿ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆಯಲು ಈಗಾಗಲೇ ಅನುಮೋದನೆ ನೀಡಲಾಗಿದೆ. ಇದರ ಜೊತೆಗೆ ಸಾರ್ವಜನಿಕರು/ ಸಂಘ ಸಂಸ್ಥೆಗಳು/ ಕುಡಿಯುವ ನೀರಿಗೆ ಸ್ವಂತ ಬೋರ್‌ವೆಲ್ ಹೊಂದಿರುವ ರೈತರ ಬೋರ್‌ವೆಲ್‌ಗಳನ್ನು ಸಹ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಪರಿಹಾರ ನೀಡಿ ಸಮಯೋಚಿತವಾಗಿ ಕಾಲಮಿತಿಯೊಳಗೆ ಬಳಸಿಕೊಳ್ಳಲು ಕ್ರಮ ತೆಗೆದುಕೊಳ್ಳಬಹುದು.
- ಸರ್ಕಾರವು ಈಗಾಗಲೇ ಘೋಷಿಸಿರುವ ಬರಪೀಡಿತ ತಾಲ್ಲೂಕಗಳ ತುರ್ತು ಕ್ರಿಯಾಯೋಜನೆಯು ಜಾಗ್ರತೆಯಾಗಿ ಅನುಷ್ಠಾನವಾಗಬೇಕು.
- ಟೋಲ್ ಫ್ರೀ ನಂ **18004258666** ನಲ್ಲಿ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ತುರ್ತು ಕ್ರಿಯಾ ಯೋಜನೆಯಡಿ ಮೊದಲ ಪರಿಹಾರ/ ಆದ್ಯತೆ ಆಗಬೇಕು.

ಮೇಲ್ಕಂಡ ತುರ್ತು ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಅಗತ್ಯವಿರುವ ಅನುದಾನವನ್ನು ಸರ್ಕಾರವು ಪ್ರತ್ಯೇಕವಾಗಿ ರಾಜ್ಯ ವಲಯದಡಿ ಬಿಡುಗಡೆ ಮಾಡಲು ಕ್ರಮವಹಿಸಲಿದೆ.

ವಿಳಂಬವಾದಲ್ಲಿ ಸದರಿ ತುರ್ತು ಕಾಮಗಾರಿಗಳಿಗೆ ನಿರೀಕ್ಷಿತ ಅನುಮೋದನೆ ದೊರೆಯುವುದಿಲ್ಲ. ಅಂತಹ ಕಾಮಗಾರಿಗಳನ್ನು **2015-16**ರ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ವಾರ್ಷಿಕ ಕ್ರಿಯಾ ಯೋಜನೆಯಡಿ ಅಳವಡಿಸಿಕೊಳ್ಳಲು ಆಯಾ ಜಿಲ್ಲಾ ಪಂಚಾಯತಿಗಳು ಮತ್ತು ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕ್ರಮ ವಹಿಸತಕ್ಕದ್ದೆಂದು ತಿಳಿಸಿದೆ.

(ಟಿ.ಎಂ. ವಿಜಯಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ (30) ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
4. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ, ಬೆಂಗಳೂರು.
5. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು, ಮತ್ತು
6. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು ಹಾಗೂ ಗ್ರಾಅಪಂ.ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ಆಯುಕ್ತರು , ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು-9.
5. ನಿರ್ದೇಶಕರು, SIRD, ಗ್ರಾಅಪಂ.ರಾಜ್ ಇಲಾಖೆ, ಮೈಸೂರು.
6. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಹೆಚ್ಚುವರಿ ಪ್ರತಿ.